# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖೆಯಲ್ಲಿ ಹೊಸದಾಗಿ ನೇಮಕಾತಿ ಹೊಂದುವ/ಹೊಂದಿರುವ ಪರೀಕ್ಷಾರ್ಥ 12 ಜೈಲರ್ ಹಾಗೂ 777 ವಾರ್ಡರ್ ಅಭ್ಯರ್ಥಿಗಳ ವೇತನವನ್ನು ತಾತ್ಕಾಲಿಕವಾಗಿ ಇಲಾಖೆಯ ಪ್ರಧಾನ ಕಛೇರಿಯಲ್ಲಿ ಡ್ರಾ ಮಾಡಲು ಅನುಕೂಲವಾಗುವಂತೆ ಸೂಪರ್ ನ್ಯೂಮರರಿ ಹುದ್ದೆಗಳನ್ನು ಸೃಜಿಸುವ ಕುರಿತು.

ಓದಲಾಗಿದೆ:- 1.ಸರ್ಕಾರದ ಆದೇಶ ಸಂಖ್ಯೆ:ಹೆಚ್‌ಡಿ 79 ಪಿಆರ್‌ಇ 2015, ದಿ:08-03-2017.

2.ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 59 ಪಿಆರ್‌ಇ 2018, ದಿ:22-11-2018 ಮತ್ತು ಆದೇಶ ಸಂಖ್ಯೆ ಹೆಚ್‌ಡಿ 116 ಪಿಆರ್‌ಇ 2017, ದಿ:07-09-2019.

3.ಕಾರಾಗೃಹ ಮತ್ತು ಸುಧಾರಣಾ ಸೇವಾ ಇಲಾಖಾ ಮುಖ್ಯಸ್ಥರ ಪತ್ರ ಸಂಖ್ಯೆ: ಇ4/ಸಿಆರ್-16/2019-20 ದಿನಾಂಕ:21-12-2019.

4.ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:ಎಫ್‌ಡಿ 40 ಎಸ್‌ಆರ್‌ಎಸ್ 1968, ದಿನಾಂಕ:14-05-1968.

********

ಪ್ರಸ್ತಾವನೆ:-

ಓದಲಾದ (1)ರ ಆದೇಶದ ಅನ್ವಯ ಕಾರಾಗೃಹ ಇಲಾಖೆಗೆ ವಿವಿಧ ವೃಂದದ ಒಟ್ಟು 1811 ಹೆಚ್ಚುವರಿ ಹುದ್ದೆಗಳನ್ನು ಸೃಜಿಸಿ 05 ವರ್ಷಗಳಲ್ಲಿ ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಆದೇಶಿಸಲಾಗಿರುತ್ತದೆ. ಅದರಂತೆ ಹೊಸದಾಗಿ ಸೃಜಿಸಲಾದ ಜೈಲರ್ ಮತ್ತು ವಾರ್ಡರ್ ಹುದ್ದೆಗಳಲ್ಲಿ 12 ಜೈಲರ್ ಹುದ್ದೆಗಳನ್ನು ಮತ್ತು 777 ವಾರ್ಡರ್ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲು ಓದಲಾದ (2)ರ ಆದೇಶಗಳಲ್ಲಿ ಅನುಮತಿ ನೀಡಲಾಗಿರುತ್ತದೆ.

ಓದಲಾದ(3)ರ ಪತ್ರದಲ್ಲಿ 12 ಜೈಲರ್ ಹುದ್ದೆಗಳ ನೇಮಕಾತಿ ಪ್ರಕ್ರಿಯೆಯನ್ನು ಪೂರ್ಣಗೊಳಿಸಿ, ನೇಮಕಾತಿ ಆದೇಶ ಹೊರಡಿಸಿ, ಆಪ್ಪಾ, ವೆಲ್ಲೂರು, ತಮಿಳುನಾಡು ಇಲ್ಲಿಗೆ 09 ತಿಂಗಳ ಬುನಾದಿ ತರಬೇತಿಗೆ ನಿಯೋಜಿಸಲಾಗಿರುತ್ತದೆ. 777 ವಾರ್ಡರ್ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಪೂರ್ಣಗೊಳಿಸಿ ನೇಮಕಾತಿ ಆದೇಶ ಹೊರಡಿಸುವ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.

ನೇಮಕಾತಿ ಆದೇಶ ಹೊರಡಿಸಿದ ನಂತರ ವಾರ್ಡರ್ ಹುದ್ದೆಗಳ ಅಭ್ಯರ್ಥಿಗಳನ್ನು 09 ತಿಂಗಳ ಬುನಾದಿ ತರಬೇತಿಗಾಗಿ ಈ ಕೆಳಕಂಡ ತಾತ್ಕಾಲಿಕ ಪೊಲೀಸ್ ತರಬೇತಿ ಶಾಲೆಗಳಿಗೆ ನಿಯೋಜಿಸಲಾಗುತ್ತದೆ.

| ಕ್ರ. ಸಂ | ತರಬೇತಿಗೆ ನಿಯೋಜಿಸಿದ ತಾತ್ಕಾಲಿಕ ಪೊಲೀಸ್ ತರಬೇತಿ ಶಾಲೆಯ ವಿವರ |
|---|---|
| 1. | ತಾತ್ಕಾಲಿಕ ಪೊಲೀಸ್ ತರಬೇತಿ ಶಾಲೆ, ಡಿ.ಎ.ಆರ್ ಬೆಳಗಾವಿ. |
| 2. | ತಾತ್ಕಾಲಿಕ ಪೊಲೀಸ್ ತರಬೇತಿ ಶಾಲೆ, ಡಿ.ಎ.ಆರ್ ತುಮಕೂರು. |
| 3. | ತಾತ್ಕಾಲಿಕ ಪೊಲೀಸ್ ತರಬೇತಿ ಶಾಲೆ, ಡಿ.ಎ.ಆರ್ ಕಲಬುರಗಿ. |
| 4. | ಪೊಲೀಸ್ ತರಬೇತಿ ಶಾಲೆ, ಖಾನಪುರ, ಬೆಳಗಾವಿ ಜಿಲ್ಲೆ. |
| 5. | ತಾತ್ಕಾಲಿಕ ಪೊಲೀಸ್ ತರಬೇತಿ ಶಾಲೆ, ಡಿ.ಎ.ಆರ್, ಧಾರವಾಡ. |
| 6. | ತಾತ್ಕಾಲಿಕ ಪೊಲೀಸ್ ತರಬೇತಿ ಶಾಲೆ, ಸಿ.ಎ.ಆರ್, ಮೈಸೂರು. |
| 7. | ಕಾರಾಗೃಹ ತರಬೇತಿ ಶಾಲೆ, ಮೈಸೂರು. |

ಹೊಸದಾಗಿ ನೇಮಕಗೊಂಡ 12 ಪರೀಕ್ಷಾರ್ಥ ಜೈಲರ್ (ವೇತನ ಶ್ರೇಣಿ ರೂ.37900-70,850) ಮತ್ತು ನೇಮಕಾತಿ ಆದೇಶ ಹೊರಡಿಸಲಾಗುವ 777 ಪರೀಕ್ಷಾರ್ಥ ವಾರ್ಡರ್ (ವೇತನ ಶ್ರೇಣಿ ರೂ.23,500-47,650) ಅಭ್ಯರ್ಥಿಗಳ ವೇತನವನ್ನು ಅರ್ಹತಾ ಪರೀಕ್ಷಾವಧಿ ಘೋಷಿಸುವವರೆಗೆ.

..2..

ಅಥವಾ ಸದರಿ ಅಭ್ಯರ್ಥಿಗಳನ್ನು ಕಾರಾಗೃಹಗಳಿಗೆ ಸ್ಥಳ ನಿಯುಕ್ತಿಗೊಳಿಸುವವರೆಗೆ ಇದರಲ್ಲಿ ಯಾವುದೋ ಮೊದಲೋ ಅಲ್ಲಿಯವರೆಗೆ ಕಾರಾಗೃಹ ಮತ್ತು ಸುಧಾರಣಾ ಸೇವೆ ಇಲಾಖೆಯ ಪ್ರಧಾನ ಕಛೇರಿಯಲ್ಲಿ ತಾತ್ಕಾಲಿಕವಾಗಿ ಹುದ್ದೆಗಳನ್ನು ಸೃಜಿಸಿ ವೇತನ ಡ್ರಾ ಮಾಡಲು ಅನುಕೂಲವಾಗುವಂತೆ ಆದೇಶ ಹೊರಡಿಸುವಂತೆ ಇಲಾಖಾ ಮುಖ್ಯಸ್ಥರು ಕೋರಿರುತ್ತಾರೆ.

ಓದಲಾದ(4)ರಲ್ಲಿ ಹೊಸದಾಗಿ ನೇಮಕಾತಿ ಹೊಂದಿ ತರಬೇತಿಯಲ್ಲಿರುವಂತಹ ಪ್ರಶಿಕ್ಷಣಾರ್ಥಿಗಳ ವೇತನವನ್ನು ಡ್ರಾ ಮಾಡುವ ಸಲುವಾಗಿ ಅರ್ಹತಾ ಪರೀಕ್ಷಾವಧಿ ಮುಗಿಯುವವರೆಗೂ ಸಂಬಂಧಪಟ್ಟ ಆಡಳಿತ ಇಲಾಖೆಯ ಕಾರ್ಯದರ್ಶಿಯವರಿಗೆ ತಾತ್ಕಾಲಿಕವಾಗಿ ಹುದ್ದೆಗಳನ್ನು ಸೃಜಿಸಿ, ವೇತನ ನೀಡಲು ಅವಕಾಶ ಕಲ್ಪಿಸಲಾಗಿರುತ್ತದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಹೆಚ್‌ಡಿ 04 ಪಿಆರ್‌ಇ 2020**

**ಬೆಂಗಳೂರು, ದಿನಾಂಕ:12-02-2020**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕಾರಾಗೃಹ ಇಲಾಖೆಯಲ್ಲಿ ಹೊಸದಾಗಿ ನೇರ ನೇಮಕಾತಿ ಮೂಲಕ ನೇಮಕಗೊಂಡು ನೇಮಕಾತಿ ಆದೇಶ ಪಡೆದ ನಂತರ ವಿವಿಧ ಪೊಲೀಸ್ ತರಬೇತಿ ಶಾಲೆಯಲ್ಲಿ ತರಬೇತಿ ಪಡೆಯಲು ನಿಯೋಜಿಸಲಾಗುವ ಪರೀಕ್ಷಾರ್ಥ 777 ವಾರ್ಡರ್‌ಗಳು ಮತ್ತು ಆಪ್ಕಾ ವೆಲ್ಲೂರಿನಲ್ಲಿ ತರಬೇತಿ ಪಡೆಯುತ್ತಿರುವ ಪರೀಕ್ಷಾರ್ಥ 12 ಜೈಲರ್‌ಗಳ ಅರ್ಹತಾ ಪರೀಕ್ಷಾವಧಿ ಘೋಷಿಸುವವರೆಗೆ ಅಥವಾ ಸದರಿ ಅಭ್ಯರ್ಥಿಗಳನ್ನು ಕಾರಾಗೃಹಗಳಿಗೆ ಸ್ಥಳ ನಿಯುಕ್ತಿಗೊಳಿಸುವವರೆಗೆ ಇದರಲ್ಲಿ ಯಾವುದೋ ಮೊದಲೋ ಅಲ್ಲಿಯವರೆಗೆ ಕೆಸಿಎಸ್‌ಆರ್ ನಿಯಮಾನುಸಾರ ಸೂಪರ್ ನ್ಯೂಮರರಿ(ತಾತ್ಕಾಲಿಕ) ಹುದ್ದೆಗಳನ್ನು ವೇತನ ಪಾವತಿಗಾಗಿ ಪ್ರಧಾನ ಕಛೇರಿಯಲ್ಲಿ ಸೃಜಿಸಿ ವೇತನ ಬಟವಾಡೆ ಮಾಡಲು ಇಲಾಖಾ ಮುಖ್ಯಸ್ಥರಿಗೆ ಅನುಮತಿಸಿದೆ.

ಸೂಪರ್ ನ್ಯೂಮರರಿ(ತಾತ್ಕಾಲಿಕ) ಹುದ್ದೆಗಳ ಅಭ್ಯರ್ಥಿಗಳನ್ನು ಕಾರಾಗೃಹಗಳಿಗೆ ಸ್ಥಳ ನಿಯುಕ್ತಿಗೊಳಿಸಿದ ನಂತರ ಕೆಸಿಎಸ್‌ಆರ್ ನಿಯಮ 100(9)(3)ರನ್ವಯ ಕ್ರಮವಹಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 20 ವೆಚ್ಚ-11/2020, ದಿನಾಂಕ:29-01-2020ರನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

M. R. Shobha
(ಎಂ.ಆರ್.ಶೋಭಾ)
ಸರ್ಕಾರದ ಅಧೀನ ಕಾರ್ಯದರ್ಶಿ
ಒಳಾಡಳಿತ ಇಲಾಖೆ (ಸೆರೆಮನೆ ಮತ್ತು ಸಿನಿಮಾ)

ಗೆ,

1. ಮಹಾಲೇಖಪಾಲರು (ಜಿ&ಎಸ್‌ಎಸ್‌ಎ, ಇ & ಆರ್‌ಎಸ್‌ಎ, ಎ&ಇ), ಕರ್ನಾಟಕ ಬೆಂಗಳೂರು.
2. ಮಹಾನಿರ್ದೇಶಕರು ಕಾರಾಗೃಹಗಳು ಮತ್ತು ಸುಧಾರಣಾ ಸೇವೆಗಳು, ಕರ್ನಾಟಕ ರಾಜ್ಯ, ಶೇಷಾದ್ರಿ ರಸ್ತೆ, ಬೆಂಗಳೂರು.

3. ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
4. ಉಪ ನಿರ್ದೇಶಕರು ಖಜಾನೆ ನಿರ್ವಹಣಾ ಗಣಕ ಯಂತ್ರ ಕೇಂದ್ರ, ಖನಿಜ ಭವನ, ಬೆಂಗಳೂರು.

ಪ್ರತಿ :-

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಿಸಿಎಎಸ್), ಇವರ ಹಿರಿಯ ಆಪ್ತ ಕಾರ್ಯದರ್ಶಿ, ಒಳಾಡಳಿತ ಇಲಾಖೆ.
2. ಸರ್ಕಾರದ ಜಂಟಿ ಕಾರ್ಯದರ್ಶಿ ಮತ್ತು ಆಂತರಿಕ ಆರ್ಥಿಕ ಸಲಹೆಗಾರರು, ಒಳಾಡಳಿತ ಮತ್ತು ಸಾರಿಗೆ ಇಲಾಖೆ,ರವರ ಆಪ್ತ ಸಹಾಯಕರು.
3. ಸರ್ಕಾರದ ಉಪ ಕಾರ್ಯದರ್ಶಿಗಳು (ಅಪರಾಧಗಳು ಹಾಗೂ ಸೆರೆಮನೆ ಮತ್ತು ಸಿನಿಮಾ), ಇವರ ಆಪ್ತ ಸಹಾಯಕರು, ಒಳಾಡಳಿತ ಇಲಾಖೆ.
4. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-11).
5. ಸರ್ಕಾರದ ಅಧೀನ ಕಾರ್ಯದರ್ಶಿ, ಒಳಾಡಳಿತ ಇಲಾಖೆ(ಸಮನ್ವಯ).
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.